**<u>ಕರ್ನಾಟಕ ಸರ್ಕಾರ</u>**

ಸಂ:ಗಭೂಇ/ಸಿಜಿಸಿ/2022-23 | 3317

ನಿರ್ದೇಶಕರ ಕಛೇರಿ,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ನಂ:49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು-01, ದಿನಾಂಕ: 07-06-2022.

- 9 JUN 2022

## <u>ಕಛೇರಿ ಆದೇಶ</u>

**ವಿಷಯ :** ಕಂಪ್ಲೇಂಟ್ ಗ್ರೀವಿಯನ್ಸ್ ಸೆಲ್‌ನಲ್ಲಿ ಸ್ವೀಕೃತಗೊಂಡ ದೂರು ವಿಲೇವಾರಿ, ಅಕ್ರಮ ಗಣಿಗಾರಿಕೆ, ಸಾಗಾಣಿಕೆ ಹಾಗೂ ಸಂಗ್ರಹಣೆ ತಡೆಗಟ್ಟಲು ಚಾಲಿತದಳ(**Squad**) ರಚಿಸುವ ಬಗ್ಗೆ.

**ಉಲ್ಲೇಖ:1.** ಮಾನ್ಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿನಾಂಕ: 08.03.2021ರಂದು ನಡೆದ ಸಭೆಯ ನಡವಳಿಗಳು.

**2.** ಈ ಕಛೇರಿ ಆದೇಶ ಸಂಖ್ಯೆ: ಗಭೂಇ/ಸಿಬ್ಬಂದಿ/ಅ-4/ಸಿಜಿಸಿ/2020-21/10366-10414, ದಿನಾಂಕ: 29.03.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ರಾಜ್ಯ ಉಚ್ಚನ್ಯಾಯಾಲಯದಲ್ಲಿ ದಾಖಲಾದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಸಂಖ್ಯೆ:16365/2017ರಲ್ಲಿನ ದಿನಾಂಕ:08.12.2020ರ ಆದೇಶದನ್ವಯ ರಾಜ್ಯಾದ್ಯಂತ ಅಕ್ರಮ ಗಣಿಗಾರಿಕೆ/ಸಾಗಾಣಿಕೆ ಹಾಗೂ ಸಂಗ್ರಹಣೆ ವಿರುದ್ಧ ಸಾರ್ವಜನಿಕರಿಂದ ಸ್ವೀಕೃತವಾಗುವ ದೂರುಗಳ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಅಕ್ರಮಗಳನ್ನು ನಿಯಂತ್ರಿಸುವ ಸಲುವಾಗಿ ಕೇಂದ್ರ ಕಛೇರಿಯಲ್ಲಿ ಕಂಪ್ಲೇಂಟ್ ಗ್ರೀವಿಯನ್ಸ್ ಸೆಲ್ ರಚಿತಗೊಂಡು ಕಾರ್ಯನಿರತವಾಗಿರುತ್ತದೆ.

ಅದರಂತೆ, ಸಾರ್ವಜನಿಕರಿಂದ ಸ್ವೀಕೃತವಾಗುವ ದೂರುಗಳನ್ನು ಸಂಬಂಧಪಟ್ಟ ಜಿಲ್ಲಾ ವ್ಯಾಪ್ತಿಯ ಕಛೇರಿಗಳಿಗೆ ವರ್ಗಾಯಿಸಿ, ಸ್ಥಳ ತಪಾಸಣೆ ನಡೆಸಿ ವರದಿಯನ್ನು ಪಡೆಯಲಾಗುತ್ತಿದೆ. ಪ್ರಸ್ತುತ ಕಂಪ್ಲೇಂಟ್ ಗ್ರೀವಿಯನ್ಸ್ ಸೆಲ್ ನಲ್ಲಿ ಈವರೆಗೆ 650ಕ್ಕೂ ಹೆಚ್ಚು ದೂರುಗಳು ಸ್ವೀಕೃತಗೊಂಡಿದ್ದು, ಇವುಗಳನ್ನು ನಿಗದಿತ ಅವಧಿಯಲ್ಲಿ ಜಿಲ್ಲಾ ಕಛೇರಿಯಿಂದ ಸ್ಥಳ ತಪಾಸಣೆ ನಡೆಸಿ ವರದಿಯನ್ನು ಪಡೆಯುವಲ್ಲಿ ಸಾಕಷ್ಟು ವಿಳಂಬವಾಗುತ್ತಿದೆ.

ಆದಕಾರಣ, ಸದರಿ ದೂರು ಅರ್ಜಿಗಳನ್ನು ತ್ವರಿತವಾಗಿ ಪರಿಶೀಲಿಸಿ ಅಕ್ರಮ ಗಣಿಗಾರಿಕೆ ಹಾಗೂ ಸಾಗಾಣಿಕೆ ತಡೆಗಟ್ಟುವಲ್ಲಿ ಅಗತ್ಯ ಕ್ರಮ ಕೈಗೊಳ್ಳುವ ಸಲುವಾಗಿ ಇಲಾಖೆಯಲ್ಲಿ ಈ ಕೆಳಕಂಡಂತೆ ಚಾಲಿತದಳದ ತಂಡಗಳನ್ನು ಮುಂದಿನ ಆದೇಶದವರೆಗೆ ರಚಿಸಿ ಆದೇಶಿಸಿದೆ.

| ಕ್ರ. ಸಂ. | ಅಧಿಕಾರಿಗಳ ಹೆಸರು, ಪದನಾಮ (ಶ್ರೀಯುತರು) | ಕಾರ್ಯನಿರ್ವಹಿಸುತ್ತಿರುವ ಕಛೇರಿ | ಕಾರ್ಯ ನಿರ್ವಹಿಸಬೇಕಾದ ಜಿಲ್ಲೆಗಳು |
|---|---|---|---|
| 1 | ರಾಜೇಶ್, ಹಿರಿಯ ಭೂವಿಜ್ಞಾನಿ, ತಂಡದ ಮುಖ್ಯಸ್ಥರು | ಚಾಲಿತದಳ, ಕೊಪ್ಪಳ | ಹಾವೇರಿ/ಕೊಪ್ಪಳ |
| | ಧರಣೀಶ್, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ವಿಜಯನಗರ | |
| | ವಿನಯ ಬಣಕಾರ್, ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ, ದಾವಣಗೆರೆ | |
| | ಮಹೇಶ್ ಡಿ ಎಸ್, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ಚಿತ್ರದುರ್ಗ. | |
| 2 | ಆಸೀಫ್ ಉಲ್ಲಾ, ಹಿರಿಯ ಭೂವಿಜ್ಞಾನಿ, ತಂಡದ ಮುಖ್ಯಸ್ಥರು | ಚಾಲಿತದಳ ಕೇಂದ್ರ ಕಛೇರಿ. | ಗದಗ/ಹೊಸಪೇಟೆ |
| | ಕುಮಾರ ಪಿ, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ಚಿತ್ರದುರ್ಗ | |
| | ಮಲ್ಲೇಶ್, ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ,ವಿಜಯನಗರ | |
| | ಶ್ರೀಹರೀಶ್, ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ, ಧಾರವಾಡ | |

| | | | |
|---|---|---|---|
| 3 | [illegible], ಹಿರಿಯ ಭೂವಿಜ್ಞಾನಿ, ತಂಡದ ಮುಖ್ಯಸ್ಥರು | ಅಪರ ನಿರ್ದೇಶಕರ ಕಛೇರಿ, ಬಳ್ಳಾರಿ | ರಾಯಚೂರು/ಕಲಬುರಗಿ |
| | ಪ್ರವೀಣ [illegible], ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ, ಬಳ್ಳಾರಿ | |
| | ರಿಯಾಜ್, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ಕಲಬುರಗಿ | |
| | ಮಲ್ಲಯ್ಯ, ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ,ವಿಜಯನಗರ | |
| 4 | ಆಶಾ ಎಂ ಎಸ್, ಹಿರಿಯ ಭೂವಿಜ್ಞಾನಿ, ತಂಡದ ಮುಖ್ಯಸ್ಥರು | ಕೇಂದ್ರ ಕಛೇರಿ, ಬೆಂಗಳೂರು | ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ |
| | ಸುದರ್ಶನ್, ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ, ಚಿಕ್ಕಬಳ್ಳಾಪುರ | |
| | ವಿಶ್ವನಾಥ್ ಹೆಚ್ ಪಿ ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ, ಕೋಲಾರ | |
| | ರಕ್ಷಿತ್ ಪಿ ಎಸ್, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ತುಮಕೂರು | |
| 5 | ಲೋಕೇಶ್ ಎಸ್, ಹಿರಿಯ ಭೂವಿಜ್ಞಾನಿ, ತಂಡದ ಮುಖ್ಯಸ್ಥರು | ಕೇಂದ್ರ ಕಛೇರಿ, ಬೆಂಗಳೂರು | ಕೋಲಾರ/ ಚಿಕ್ಕಬಳ್ಳಾಪುರ |
| | ಸಂತೋಷ್ ಕುಮಾರ್ ಬಿ ಸಿ, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ತುಮಕೂರು | |
| | ರಜನಿ ಹಡಗಲಿ, ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ, ಬೆಂ. ನಗರ | |
| | ವಿಜಯ್, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ಬೆಂ. ಗ್ರಾ | |
| 6 | ನಾಗೇಂದ್ರಪ್ಪ, ಹಿರಿಯ ಭೂವಿಜ್ಞಾನಿ, ತಂಡದ ಮುಖ್ಯಸ್ಥರು | ಕೇಂದ್ರ ಕಛೇರಿ, ಬೆಂಗಳೂರು | ಮಂಡ್ಯ, ಮೈಸೂರು, ಮಡಿಕೇರಿ |
| | ಡಾ: ಮಾಲತಿ, ಭೂವಿಜ್ಞಾನಿ | ಕೇಂದ್ರ ಕಛೇರಿ, ಬೆಂಗಳೂರು | |
| | ಪವನ್ ಸಿ, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ರಾಮನಗರ | |
| | ಪ್ರಶಾಂತ್ ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ರಾಮನಗರ | |
| 7 | ನಿರಂಜನ್ ಪಿ ಎಂ, ಹಿರಿಯ ಭೂವಿಜ್ಞಾನಿ, ತಂಡದ ಮುಖ್ಯಸ್ಥರು | ಜಾಲಿತದಳ, ಚಿತ್ರದುರ್ಗ | ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ |
| | ದಯಾನಂದ, ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ, ಚಿಕ್ಕಮಗಳೂರು | |
| | ಪ್ರದೀಪ್, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ತುಮಕೂರು | |
| | ನಾಗಮಧು, ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ, ಹಾಸನ | |
| 8 | ರಾಮಲಿಂಗಯ್ಯ, ಭೂವಿಜ್ಞಾನಿ, ತಂಡದ ಮುಖ್ಯಸ್ಥರು | ಹಿರಿಯ ಭೂವಿಜ್ಞಾನಿ ಕಛೇರಿ, ಮೈಸೂರು | ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ |
| | ಮಹೇಶ್, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ಮಂಡ್ಯ | |
| | ಹಾಜೀರಾ ಸಜನಿ, ಭೂವಿಜ್ಞಾನಿ | ಹಿರಿಯ ಭೂವಿಜ್ಞಾನಿ ಕಛೇರಿ, ಉಡುಪಿ | |
| | ಜಯರಾಂ ಗಣಪತಿ ನಾಯಕ್, ಭೂವಿಜ್ಞಾನಿ | ಉಪನಿರ್ದೇಶಕರ ಕಛೇರಿ, ಕಾರವಾರ | |

ಸದರಿ ತಂಡಗಳಲ್ಲಿರುವ ಮುಖ್ಯಸ್ಥರು/ಹಿರಿಯಭೂವಿಜ್ಞಾನಿಗಳು ಈ ಆದೇಶ ತಲುಪಿದ ಕೂಡಲೇ ಕೇಂದ್ರ ಕಛೇರಿಯ ಕಂಪ್ಲೇಂಟ್ ಗ್ರೀವಿಯನ್ಸ್ ಸೆಲ್‌ನಲ್ಲಿನ ತಮಗೆ ವಹಿಸಲಾಗಿರುವ ಜಿಲ್ಲೆಗಳ ವ್ಯಾಪ್ತಿಯಲ್ಲಿ ದಾಖಲಾಗಿರುವ ದೂರು ಕಡತಗಳನ್ನು ಸುಪರ್ದಿಗೆ ಪಡೆದುಕೊಂಡು, ಸ್ಥಳ ತಪಾಸಣೆ ನಡೆಸಿ, ಅಕ್ರಮ ಗಣಿಗಾರಿಕೆ, ಸಾಗಾಣಿಕೆ ಹಾಗೂ ಸಂಗ್ರಹಣೆ ಕಂಡು ಬಂದಿದ್ದಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಸೂಕ್ತ ಶಿಫಾರಸ್ಸನ್ನು ಈ ಪತ್ರದೊಂದಿಗೆ ಲಗತ್ತಿಸಲಾದ ನಿಗದಿತ ನಮೂನೆಯಲ್ಲಿಯೇ ಭರ್ತಿ ಮಾಡಿ ದೃಢೀಕರಣದೊಂದಿಗೆ ಹಾಗೂ ಅಗತ್ಯ ದಾಖಲೆಗಳನ್ನು ಲಗತ್ತಿಸಿ 30 ದಿನಗಳೊಳಗಾಗಿ ತಪ್ಪದೇ ಕಡತಗಳ ಸಮೇತ ಜಂಟಿ ನಿರ್ದೇಶಕರು(ದಕ್ಷಿಣ ವಲಯ)/ಅಪರ ನಿರ್ದೇಶಕರು, ಬಳ್ಳಾರಿ ರವರ ಮುಖಾಂತರ ವರದಿ ಸಲ್ಲಿಸಲು ಸೂಚಿಸಿದೆ.

ಜಾಲಿತದಳದ ತಂಡಗಳು ಜಂಟಿ ನಿರ್ದೇಶಕರು(ದಕ್ಷಿಣ ವಲಯ)/ಅಪರ ನಿರ್ದೇಶಕರು, ಬಳ್ಳಾರಿ ಕಛೇರಿಗಳಿಗೆ ವರದಿಗಳನ್ನು ಸಲ್ಲಿಸಿದ ನಂತರ ಅವುಗಳನ್ನು ಕೂಲಂಕುಷವಾಗಿ ಪರಿಶೀಲಿಸುವುದಲ್ಲದೇ ದೂರಿನಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಸ್ಥಳ ಪರಿಶೀಲನೆ ವೇಳೆ ಪರಿಗಣನೆಗೆ ತೆಗೆದುಕೊಳ್ಳಲಾಗಿದೆಯೇ? ಜಾಲಿತದಳದವರು ದಾಖಲಿಸಿರುವ

ಅಭಿಪ್ರಾಯ ಮತ್ತು ಶಿಫಾರಸ್ಸುಗಳನ್ನು ಒಪ್ಪಬಹುದೇ? ಇಲ್ಲವೇ ಎಂಬ ಬಗ್ಗೆ, ಅಥವಾ ಇನ್ನೂ ಹೆಚ್ಚಿನ ಕ್ರಮದ ಅಗತ್ಯವಿದೆಯೇ? ದೂರಿನಲ್ಲಿ ಅಧಿಕಾರಿಗಳ ಮೇಲೆ ಆರೋಪಗಳಿದ್ದಲ್ಲಿ ಅಂತಹ ಆರೋಪಗಳು ಸಾಬೀತಾಗಿರುತ್ತವೆಯೇ? ಹಾಗೂ ಪರಿಶೀಲನೆ ವೇಳೆ ಕಂಡು ಬರುವಂತಹ ಇತರೆ ಅಂಶಗಳ ಕುರಿತು ಸ್ಪಷ್ಟ ಶಿಫಾರಸ್ಸಿನೊಂದಿಗೆ ತಮ್ಮ ಅಭಿಪ್ರಾಯವನ್ನು ಜಾಲಿತದಳದವರು ವರದಿ ಸಲ್ಲಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ವರದಿಯನ್ನು ಸಲ್ಲಿಸಲು ಸೂಚಿಸಿದೆ.

ಕೇಂದ್ರ ಕಛೇರಿಯ ವಾಹನ ಶಾಖೆಯವರು ಜಾಲಿತದಳದ ತಂಡಗಳಿಗೆ ವಾಹನ, ಚಾಲಕರು ಹಾಗೂ ಇಂಧನ ಸೌಲಭ್ಯಗಳನ್ನು ಒದಗಿಸತಕ್ಕದ್ದು ಮತ್ತು ಆಯಾ ಜಿಲ್ಲೆಗಳಲ್ಲಿ ಕೈಗೊಳ್ಳಲಿರುವ ಸ್ಥಳ ತಪಾಸಣೆ ಸಂದರ್ಭದಲ್ಲಿ ಸಂಬಂಧಪಟ್ಟ ಜಿಲ್ಲಾ ಕಛೇರಿಯ ಮುಖ್ಯಸ್ಥರುಗಳು ವಾಹನಗಳಿಗೆ ಇಂಧನವನ್ನು ಒದಗಿಸತಕ್ಕದ್ದು.

ನಿರ್ದೇಶಕರು

ಸಂಬಂಧಪಟ್ಟವರಿಗೆ,

<u>ಪ್ರತಿಯನ್ನು:</u>

1. ಅಪರ ನಿರ್ದೇಶಕರು, ಉತ್ತರ ವಲಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬಳ್ಳಾರಿ.
2. ಜಂಟಿ ನಿರ್ದೇಶಕರು, ದಕ್ಷಿಣ ವಲಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮೈಸೂರು.
3. ಜಂಟಿ ನಿರ್ದೇಶಕರು (ಖನಿಜ /ಆಡಳಿತ), ಕೇಂದ್ರ ಕಛೇರಿ, ಬೆಂಗಳೂರು.
4. ಉಪನಿರ್ದೇಶಕರು (ಖನಿಜಾಡಳಿತ)/ಕಾನೂನು/ಯೋಜನೆ/ಆರ್ & ಡಿ, ಕೇಂದ್ರ ಕಛೇರಿ, ಬೆಂಗಳೂರು.
5. ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಾಮನಗರ/ ಚಾಮರಾಜನಗರ/ ಬಾಗಲಕೋಟೆ/ ಹೊಸಪೇಟೆ/ ಬೆಂಗಳೂರು ಗ್ರಾಮಾಂತರ/ ಬೆಳಗಾವಿ/ ಚಿತ್ರದುರ್ಗ/ ಕಲಬುರಗಿ/ ಕಾರವಾರ/ ತುಮಕೂರು/ ಮಂಗಳೂರು.
6. ಉಪ ಮುಖ್ಯ ಕೊರೆಯುವ ಅಭಿಯಂತರರು, ಕೇಂದ್ರ ಕಛೇರಿ, ಬೆಂಗಳೂರು.
7. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ನಗರ/ ಮೈಸೂರು/ ಬಳ್ಳಾರಿ/ ವಿಜಯಪುರ/ ಕೊಪ್ಪಳ/ ಕೋಲಾರ/ ಶಿವಮೊಗ್ಗ/ ಚಿಕ್ಕಮಗಳೂರು/ ಹಾಸನ/ ಧಾರವಾಡ/ ಮಂಡ್ಯ/ ಗದಗ/ ಉಡುಪಿ/ ಚಿಕ್ಕಬಳ್ಳಾಪುರ/ ಹಾವೇರಿ/ ದಾವಣಗೆರೆ/ ಮಡಿಕೇರಿ/ ಬೀದರ್/ ಯಾದಗಿರಿ/ ರಾಯಚೂರು/ವಿಜಯನಗರ ಜಿಲ್ಲೆ.
8. ಹಿರಿಯ ಭೂವಿಜ್ಞಾನಿ, ಮರಳು ಕೋಶ, ಕೇಂದ್ರ ಕಛೇರಿ, ಬೆಂಗಳೂರು.
9. ಇ-ಸೆಲ್ ವಿಭಾಗಕ್ಕೆ ಕಳುಹಿಸುತ್ತಾ, ಸದರಿ ಆದೇಶವನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
10. ಅಧೀಕ್ಷಕರು, ಗಣಿಗುತ್ತಿಗೆ/ಕಲ್ಲುಗಣಿ ಗುತ್ತಿಗೆ/ವಾಹನ ಶಾಖೆ/ಲೆಕ್ಕ ಶಾಖೆ/ಹುಂಡಿ ಶಾಖೆ/ಸಿಬ್ಬಂದಿ
11. ಕೇಂದ್ರ ಕಛೇರಿಯ ಸೂಚನಾ ಫಲಕಕ್ಕೆ.

# ಸ್ಥಳ ಪರಿಶೀಲನಾ ವರದಿಯ ಚೆಕ್ ಲಿಸ್ಟ್

## 1. ದೂರು ಅರ್ಜಿಗೆ ಸಂಬಂಧಿಸಿದ ವಿವರ:

| (1) ದೂರು ಅರ್ಜಿ ಸಂಖ್ಯೆ: | (2) ದಿನಾಂಕ: | (3) ದೂರುದಾರರ ಹೆಸರು |
| --- | --- | --- |
| | | |

## 2. ಸ್ಥಳ ವಿವರ:

| (1) ಜಿಲ್ಲೆ | (2) ತಾಲ್ಲೂಕು | (3) ಹೋಬಳಿ |
| --- | --- | --- |
| | | |
| (4) ಗ್ರಾಮ/ಗಳು | (5) ಸರ್ವೆ ನಂಬರ್ ಗಳು | |
| **(i)**<br>**(ii)**<br>**(iii)** | | |

## 3. ಸ್ಥಳ ಪರಿಶೀಲನೆ ಮಾಡಿದ ಅಧಿಕಾರಿಗಳ ವಿವರ:

| (1) ಅಧಿಕಾರಿಗಳ ಹೆಸರು | (2) ಪದನಾಮ | (3) ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕಛೇರಿ |
| --- | --- | --- |
| | | |
| (4) ಸ್ಥಳ ಪರಿಶೀಲನೆ ಮಾಡಿದ ದಿನಾಂಕ _ ರಿಂದ _ ರವರೆಗೆ | (5) ಸಮಯ | (6) ದೂರುದಾರರಿಗೆ ಸ್ಥಳ ತನಿಖೆಗೆ ಹಾಜರಾಗಲು ಪತ್ರ ಮುಖೇನ ತಿಳಿಸಲಾಗಿತ್ತೇ?(ಹೌದು/ಇಲ್ಲ) |
| | | |

| (7) ದೂರುದಾರರ ಸಮಕ್ಷಮದಲ್ಲಿ ಸ್ಥಳ ತನಿಖೆ ನಡೆಸಲಾಗಿದೆಯೇ? ಹೌದು/ಇಲ್ಲ; ಇಲ್ಲವಾದಲ್ಲಿ ಅದಕ್ಕೆ ಕಾರಣಗಳು | (8) ಲಗತ್ತುಗಳು (ಮಹಜರ್, ಛಾಯಾಚಿತ್ರ, ನಕಾಶೆ, ನ್ಯಾಯಾಲಯದ ಆದೇಶ ಇತ್ಯಾದಿ) |
| --- | --- |
| | |

## 4. ಸ್ಥಳ ಪರಿಶೀಲನೆಯ ಫಲಿತಾಂಶ:

| |
|---|
| (1) ದೂರಿನಲ್ಲಿ ತಿಳಿಸಿರುವಂತೆ ಅಕ್ರಮ ಗಣಿಗಾರಿಕೆ/ಸಾಗಾಣಿಕೆ/ದಾಸ್ತಾನು ನಡೆದಿದೆಯೇ? ಹೌದು ಅಥವಾ ಇಲ್ಲ: |
| (2) ಹೌದಾದಲ್ಲಿ ಯಾವ ರೀತಿಯ ಅಕ್ರಮ ನಡೆದಿದೆ? ಹಾಗೂ ಆಗಿರುವ ನಿಯಮಗಳ ಉಲ್ಲಂಘನೆ: |
| (3) ಅಕ್ರಮದಲ್ಲಿ ತೊಡಗಿರುವ ವ್ಯಕ್ತಿ / ಸಂಸ್ಥೆಗಳ ಹೆಸರು, ವಿಳಾಸ ಇತ್ಯಾದಿ ವಿವರ: |
| (4) ದೂರಿನಲ್ಲಿ ತಿಳಿಸಿರುವ ಪ್ರದೇಶದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ/ಸಾಗಾಣಿಕೆ/ದಾಸ್ತಾನು ಬಗ್ಗೆ ಈಗಾಗಲೇ ಜಿಲ್ಲಾ ಕಛೇರಿಯಿಂದ ಕ್ರಮ ಕೈಗೊಂಡಿದ್ದಲ್ಲಿ ವಿವರ:(ನೋಟೀಸ್ ವಿವರ, ವಸೂಲಿ ಮಾಡಲಾದ ದಂಡದ ವಿವರ, ಕ್ರಿಮಿನಲ್ ಮೊಕದ್ದಮೆ ದಾಖಲು (PCR) ವಿವರ ಇತ್ಯಾದಿ): |

## 5. ಅಕ್ರಮ ಗಣಿಗಾರಿಕೆ/ಸಾಗಾಣಿಕೆ/ದಾಸ್ತಾನು ನಡೆದಿರುವ ಪ್ರದೇಶದ ವಿವರ:

| (1) ಜಿಲ್ಲೆ | | (2) ತಾಲ್ಲೂಕು | | (3) ಹೋಬಳಿ | |
|---|---|---|---|---|---|
| | | | | | |
| (4) ಗ್ರಾಮ | | (5) ಸರ್ವೆ ನಂಬರ್ | | (6) ವಿಸ್ತೀರ್ಣ | |
| (i) | | (i) | | (i) | _____ ಎಕರೆ ____ ಗುಂಟೆ |
| (ii) | | (ii) | | (ii) | _____ ಎಕರೆ ____ ಗುಂಟೆ |
| (iii) | | (iii) | | (iii) | _____ ಎಕರೆ ____ ಗುಂಟೆ |
| (iv) | | (iv) | | (iv) | _____ ಎಕರೆ ____ ಗುಂಟೆ |
| | | | | ಒಟ್ಟು: | _____ ಎಕರೆ ____ ಗುಂಟೆ |

## 6. ಅಕ್ರಮ ಗಣಿಗಾರಿಕೆ /ಸಾಗಾಣಿಕೆ/ದಾಸ್ತಾನು ಮಾಡಿರುವ ಖನಿಜ ಪ್ರಮಾಣ ಹಾಗೂ ಮೌಲ್ಯದ ಬಗ್ಗೆ ವಿವರ:

| (1) ಖನಿಜದ ಹೆಸರು | (2) ಅಕ್ರಮವಾಗಿ ಸಾಗಾಣಿಕೆ ಆಗಿರುವ/ಮಾಡುತ್ತಿದ್ದ ಖನಿಜದ ಪ್ರಮಾಣ (ಮೆ.ಟನ್/ಕ್ಯೂ.ಮೀ ಗಳಲ್ಲಿ) | (3) ಸ್ಥಳದಲ್ಲಿ ಹಾಲಿ ಲಭ್ಯವಿರುವ ಖನಿಜದ ಪ್ರಮಾಣ (ಮೆ.ಟನ್/ಕ್ಯೂ.ಮೀ ಗಳಲ್ಲಿ) | (4) ಒಟ್ಟು ಖನಿಜದ ಪ್ರಮಾಣ (ಮೆ.ಟನ್/ಕ್ಯೂ.ಮೀ ಗಳಲ್ಲಿ) |
|---|---|---|---|
| | | | |
| (5) ಅಕ್ರಮ ಗಣಿಗಾರಿಕೆಯಿಂದ ಹೊರತೆಗೆಯಲಾದ ಖನಿಜದ ಒಟ್ಟು ಪ್ರಮಾಣ ಮತ್ತು ಈ ಪ್ರಮಾಣದಲ್ಲಿ ಅಂದಾಜು ಎಷ್ಟು ಅವಧಿಯಿಂದ ಗಣಿಗಾರಿಕೆ ನಡೆಸಿ ಖನಿಜ ತೆಗೆಯಲಾಗಿರುತ್ತದೆ? (ಗೂಗಲ್ ನಕಾಶೆ ಪರಿಶೀಲಿಸಿ ಮಾಹಿತಿ ಸಲ್ಲಿಸುವುದು): | | | |
| | | | |

7. ಅಕ್ರಮ ಗಣಿಗಾರಿಕೆ/ಸಾಗಾಣಿಕೆ/ದಾಸ್ತಾನು ಮೂಲಕ ಸರ್ಕಾರದ ಬೊಕ್ಕಸಕ್ಕೆ ಆಗಿರುವ ನಷ್ಟ:

| ವಿವರ | ದರ (ಪ್ರತಿ ಮೆ.ಟನ್/ಕ್ಯೂ.ಮೀ ಗಳಿಗೆ) | ಪ್ರಮಾಣ(ಮೆ.ಟನ್/ಕ್ಯೂ. ಮೀ ಗಳಲ್ಲಿ) | ಮೊತ್ತ |
|---|---|---|---|
| ಷೆಡ್ಯೂಲ್-IC ರಂತೆ ಅನ್ವಯವಾಗುವ ಮೊತ್ತ | | | |
| ರಾಜಧನ | | | |
| ಇತರ ಶುಲ್ಕ | | | |
| ಒಟ್ಟು | - | | |
| ಒಟ್ಟು ನಷ್ಟದ ಮೊತ್ತ ರೂಪಾಯಿಗಳಲ್ಲಿ: | | | |

8. ಸ್ಥಳ-ಪರಿಶೀಲನೆ ನಡೆಸಿದ ಭೂವಿಜ್ಞಾನಿಗಳ ಅಭಿಪ್ರಾಯ/ಶಿಫಾರಸ್ಸು:

ಸ್ಥಳ ಪರಿಶೀಲನೆ ನಡೆಸಿದ
ಅಧಿಕಾರಿಗಳ ಸಹಿ ಮತ್ತು ಮೊಹರು

**9.** ತಂಡದ ಮುಖ್ಯಸ್ಥರ ಶಿಫಾರಸ್ಸು:

| |
|---|
| |

ಸಹಿ

ಪದನಾಮ ಮತ್ತು ಮೊಹರು

**10.** ಅಪರ ನಿರ್ದೇಶಕರು, ಬಳ್ಳಾರಿ/ಜಂಟಿ ನಿರ್ದೇಶಕರು(ದಕ್ಷಿಣ ವಲಯ), ಮೈಸೂರು ಇವರ ಶಿಫಾರಸ್ಸು:

| |
|---|
| |

ಸಹಿ

ಪದನಾಮ ಮತ್ತು ಮೊಹರು